ಹೇಳಿದರೂ ಅದನ್ನೊಬ್ಬ ಮುಸ್ಲಿಂ ಹೇಳುತ್ತಿದ್ದಾನೆ ಎಂದು ತಿರುಚಿದರೆ ನನಗೆಷ್ಟು ನೋವಾಗುತ್ತದೆ, ಯೋಚಿಸಿ?' ಎಂದು ಹೇಳುತ್ತಾ, ದೇಶದಲ್ಲಿ ನಡೆಯುತ್ತಿದ್ದ ವಿಕಾರಮಯ ಬೆಳವಣಿಗೆಗಳ ಬಗೆಗೆ ಸಿಟ್ಟಾದರು. ರಂಗಾಯಣದ ಪ್ರಬುದ್ಧ ಪ್ರೇಕ್ಷಕರಿಗೆ ಇರ್ಫಾನ್ ನೋವು, ಕಾಳಜಿ, ಆತಂಕ ಎಲ್ಲವೂ ಅರ್ಥವಾಗಿತ್ತು. ಇರ್ಫಾನ್ ನಿಜಕ್ಕೂ ತನಗೆ ಅನ್ನಿಸಿದ್ದನ್ನು ಹೇಳುತ್ತಿದ್ದರು. ಸೆನ್ಸಾರ್ ಬೋರ್ಡೇ ಅನಗತ್ಯ ಎಂದರು; ದೇಶದಲ್ಲಿ ಯಾವುದೇ ಒಂದು ಮಾರ್ಗ ಪ್ರಬಲವಾದರೆ ಉಂಟಾಗುವ ಅಪಾಯದ ಬಗ್ಗೆ, ನಟರು ಸಾಮಾಜಿಕ ಪ್ರಶ್ನೆಗಳ ಬಗ್ಗೆ ಮಾತಾಡಲೇಬೇಕಾದ ಅನಿವಾರ್ಯತೆಯ ಬಗ್ಗೆ ಇರ್ಫಾನ್ ಮಾತಾಡುತ್ತಾ ಹೋದರು.

ರಾತ್ರಿಯ ಪಾರ್ಟಿಯಲ್ಲಿ ಇರ್ಫಾನ್ ಇನ್ನಷ್ಟು ಮುಕ್ತವಾಗಿದ್ದರು. ಅವರು ಎಲ್ಲರೊಡನೆ ಬೆರೆಯುತ್ತಿದ್ದ ರೀತಿಯನ್ನು, ಮಾತಾಡುತ್ತಿದ್ದ ರೀತಿಯನ್ನು ಗಮನಿಸಿದವರಿಗೆ ಇರ್ಫಾನ್ ಇಲ್ಲೇ ನಮ್ಮ ಕಲಾಸಿಪಾಳ್ಯದಲ್ಲಿ ಕಾಣುವ ತೆಳ್ಳಗಿನ ಮುಸ್ಲಿಂ ತರುಣರ ಹಾಗೆ ಕಂಡಿದ್ದರೆ ಅಚ್ಚರಿಯಲ್ಲ. ಅದಕ್ಕೆ ಸರಿಯಾಗಿ ಕೊರಳಿಗೆ ಮಫ್ಲರ್ ಬೇರೆ! ದೆಹಲಿಯಲ್ಲಿ ವಿದ್ಯಾರ್ಥಿಯಾಗಿದ್ದ ಇರ್ಫಾನ್ ದಪ್ಪಗಾಗಲಿ ಎಂದು ಅವರ ಅಮ್ಮ ಕ್ಯಾರಿಯರ್ ತುಂಬ ತುಪ್ಪ ತಂದು ಕೊಡುತ್ತಿದ್ದುದನ್ನೂ, ಅದನ್ನು ಇರ್ಫಾನ್ ಯಾರಿಗೂ ಕೊಡದೆ ತಿನ್ನುತ್ತಿದ್ದುದನ್ನೂ ಸುಮತಿ ನೆನಪಿಸಿದರು. 'ಹಾಂ! ನಾನು ಕಡ್ಡೀ ಪೈಲ್ವಾನ್ ಥರಾ ಇದ್ದೆನಲ್ಲ, ದಪ್ಪ ಆಗಬೇಕು ಅನ್ನೋ ಆಸೆಯಿಂದ ಯಾರಿಗೂ ಕೊಡದೆ ಎಲ್ಲಾ ತುಪ್ಪವನ್ನೂ ನಾನೇ ತಿನ್ನುತ್ತಿದ್ದೆ. ದಪ್ಪ ಆಗಬೇಕು ಅಂತ ರೋಡ್ ಸೈಡ್ ತಿಂಡಿಗಳನ್ನೂ ತಿನ್ನುತ್ತಿದ್ದೆ. ಆದರೂ ಪ್ರಯೋಜನವಾಗಲಿಲ್ಲ!' ಎಂದರು ಇರ್ಫಾನ್.

ಆಗ ನನಗೆ ಇರ್ಫಾನ್ ಒಬ್ಬ ವಿಶಿಷ್ಟ ನಟ ಎಂಬ ಅಂದಾಜು ಇತ್ತೇ ಹೊರತು ಅವರ ಮುಖ್ಯ ಸಿನಿಮಾಗಳನ್ನಿನ್ನೂ ನೋಡಿರಲಿಲ್ಲ. 'ಸ್ಲಂ ಡಾಗ್ ಮಿಲಿಯನೇರ್', 'ಲಂಚ್ ಬಾಕ್ಸ್' ಥರದ ಸಿನಿಮಾಗಳನ್ನು ಮಾತ್ರ ಗಮನಿಸಿದ್ದೆ. ಅಲ್ಲಲ್ಲಿ ಅವರ ನಟನೆಯ ತುಣುಕುಗಳನ್ನು ಗಮನಿಸಿದ್ದೆ. ಆದರೆ ವ್ಯಕ್ತಿಯೊಬ್ಬ ನಿಜವಾದ ನಟನೋ ಅಲ್ಲವೋ ಎಂಬುದನ್ನು ತಿಳಿಯಲು ಒಂದೇ ಸಿನಿಮಾ ಅಥವಾ ಒಂದೇ ಪಾತ್ರ ಸಾಕು ಎಂಬುದು ನನ್ನ ಅನುಭವ. ಹೀಗಾಗಿ ನಾನು ಗಮನಿಸಿದ್ದ ಕೆಲವೇ ಪಾತ್ರಗಳಲ್ಲೇ ಇರ್ಫಾನ್ ಪಾತ್ರಕ್ಕೆ ತಕ್ಕಂತೆ 'ನಟಿಸದೆ', ಯಾವುದೇ ಪಾತ್ರವನ್ನಾಗಲೀ ಮರು ಸೃಷ್ಟಿಸುವ ಸೃಜನಶೀಲ ಕಲಾವಿದ ಎಂಬುದು ಮನದಟ್ಟಾಗಿತ್ತು.

ಆದ್ದರಿಂದಲೋ ಏನೋ ಆ ರಾತ್ರಿ, 'ಒಂದಲ್ಲ ಒಂದು ದಿನ ನಿಮಗೆ ಆಸ್ಕರ್ ಪ್ರಶಸ್ತಿ ಬಂದೇ ಬರುತ್ತದೆ' ಎಂದು ಹೇಳುವ ಧೈರ್ಯ ಮಾಡಿದೆ: 'ಒಂದು ಕಾಲಕ್ಕೆ ನಾಸಿರುದ್ದೀನ್ ಶಾ ನಟನೆಗೆ ಆಸ್ಕರ್ ಬರಬಹುದೆಂದುಕೊಂಡಿದ್ದೆ; ಬರಬರುತ್ತಾ ಅವರ ನಟನೆ ಇಳಿಮುಖವಾಯಿತು; ನಾನಾ ಪಾಟೇಕರ್ ತಮ್ಮ ಸತ್ವ ಕಳಕೊಂಡರು ನೀವು ಈಗಿರುವ ಹಾದಿಯಲ್ಲೇ ಮುಂದುವರಿದರೆ ಮುಂದೆ ನಿಮಗೆ ಆಸ್ಕರ್ ಬರುವುದು ಗ್ಯಾರಂಟಿಯೆಂಬುದು ನನ್ನ ನಂಬಿಕೆ.'

ಈ ಮಾತಿನಿಂದ ಇರ್ಫಾನರಿಗೇನೂ ಅಚ್ಚರಿಯಾಗಲಿಲ್ಲ. ನಟನೆಯನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಂಡಿದ್ದ, ನಟನಾಲೋಕದ ನಿತ್ಯ ವಿದ್ಯಾರ್ಥಿಯಂತಿದ್ದ ಅವರಿಗೆ ಆ ಆತ್ಮವಿಶ್ವಾಸ ಇದ್ದಂತಿತ್ತು. ಆದರೂ 'ಹೌ ಡೂ ಯೂ ಸೇ ದಟ್?' ಎಂದರು. ನಾನು ಹುಸಿ ಗಾಂಭೀರ್ಯದಲ್ಲಿ, 'ಐ ಸೇ ದಿಸ್ ಬಿಕಾಸ್ ಐ ನೋ ಎ ಬಿಟ್ ಆಫ್ ಅಸ್ಟ್ರಾಲಜಿ!' ಎಂದೆ. 'ರಿಯಲಿ?' ಎಂದ ಇರ್ಫಾನ್, 'ಹಾಗಾದರೆ ನನ್ನ ಕೈ ನೋಡಿ!' ಎಂದು ತಮ್ಮ ಕೈ ಚಾಚಿಯೇ ಬಿಟ್ಟರು. ತಬ್ಬಿಬ್ಬಾದ ನಾನು, 'ಅಸ್ಟ್ರಾಲಜಿಯ ಮಾತನ್ನು ತಮಾಷೆಗೆ ಹೇಳಿದೆ! ಆದರೆ ಆಸ್ಕರ್ ಬಗ್ಗೆ ಹೇಳಿದ್ದು ಮಾತ್ರ ನನ್ನ ಆಳದ ಗ್ರಹಿಕೆಯಿಂದ' ಎಂದೆ. ಇರ್ಫಾನರ 'ಮಖಬೂಲ್', 'ಪಾನ್ ಸಿಂಗ್ ತೋಮರ್' ಸೇರಿದಂತೆ ಅವರ ಇನ್ನಿತರ ಮುಖ್ಯ ಸಿನಿಮಾಗಳನ್ನು ನೋಡಿರುವವರು ಈ ಮಾತನ್ನು ಒಪ್ಪದಿರಲಾರರು!

ರಾತ್ರಿ ಹನ್ನೊಂದಾಗುತ್ತಿತ್ತು. ಇರ್ಫಾನ್ ಮತ್ತು ಸುತಾಪ ಮಧ್ಯರಾತ್ರಿಯ ವಿಮಾನ ಹಿಡಿಯಬೇಕಾಗಿತ್ತು. ಟೈಮ್ ನೋಡುತ್ತಾ ಮೇಲೆದ್ದ ಇರ್ಫಾನ್, ತಮ್ಮ ಕೈಯಲ್ಲಿದ್ದ ಗ್ಲಾಸನ್ನು ನೋಡುತ್ತಾ 'ಇದನ್ನು ಕಾರಿನಲ್ಲಿ ಒಯ್ಯಬಹುದೇ?' ಎಂದರು. ಆ ರಾತ್ರಿ ನಸುನಗುತ್ತಾ ಭವಿಷ್ಯ ಕೇಳಲು ಇರ್ಫಾನ್ ನನ್ನೆದುರು ಚಾಚಿದ ಕೈ ಹಾಗೂ ಗ್ಲಾಸ್ ಹಿಡಿದ ಕೈ ಎರಡೂ ನನ್ನ ಕಣ್ಣ ಮುಂದಿವೆ. ಈ ಆತ್ಮೀಯ ಭೇಟಿ ಹಾಗೂ ಇರ್ಫಾನ್ ನಮ್ಮೊಂದಿಗೆ ಸಹಜವಾಗಿ ಬೆರೆತ ರೀತಿ ಕೂಡ ಆನಂತರ ನಾನು ಅವರ ಸಿನಿಮಾಗಳನ್ನು ಹತ್ತಿರದಿಂದ ಗಮನಿಸುವಂತೆ ಮಾಡಿತು. ಮುಂದೆ ಕರಕುಶಲಿಗಳ ಪರವಾಗಿ ಪ್ರಸನ್ನ ರೂಪಿಸಿದ ಹೋರಾಟಕ್ಕೂ ಇರ್ಫಾನ್ ಬಂದರು. ಆ ಸಭೆಯಲ್ಲಿ ಅವರು ಹೇಳಿದ್ದನ್ನು ಓದಿದಾಗ ಅವರ ಸೂಕ್ಷ್ಮತೆಯ ಬಗ್ಗೆ ಇನ್ನಷ್ಟು ಗೌರವ ಹುಟ್ಟಿತು. 'ಕೈ, ಕಾಲು, ಆತ್ಮ, ಭಾವನೆ, ಮಾತುಗಳನ್ನು ಬಳಸಿ ನಟನೆ ಮಾಡುವ ನನಗೆ, ಕೈಗಳನ್ನು ಬಳಸಿ ಕೆಲಸ ಮಾಡುವ ಕುಶಲಕರ್ಮಿಗಳು ನನ್ನ ಅಣ್ಣ ತಂಗಿಯರಂತೆ ಕಾಣುತ್ತಾರೆ. ನನಗೆ ದುಡ್ಡು ಬರುತ್ತೆ; ಆದರೆ ಈ ಕುಶಲಕರ್ಮಿಗಳು ತಮ್ಮ ಉಳಿವಿಗಾಗಿ ಹೋರಾಡುತ್ತಿದ್ದಾರೆ' ಎಂದು ವ್ಯಥೆಯಿಂದ ಹೇಳಿದ್ದರು.

ಎರಡು ವರ್ಷದ ಕೆಳಗೆ ಇರ್ಫಾನರಿಗೆ ಬ್ರೈನ್ ಟ್ಯೂಮರ್ ಆದ ಸುದ್ದಿ ಕೇಳಿ ವಿಚಲಿತರಾದವರಲ್ಲಿ ನಾನೂ ಒಬ್ಬ. ಇರ್ಫಾನ್ ಪಯಣ ಮುಗಿಯಿತು ಎಂಬ ಸುದ್ದಿ ಬರುತ್ತಲೇ ಇತ್ತು. ಆದರೆ ಇರ್ಫಾನ್ ಸಾವನ್ನು ಗೆದ್ದು ಬಂದು, 'ಆಂಗ್ರೇಝಿ ಮೀಡಿಯಂ' ಸಿನಿಮಾದಲ್ಲೂ ನಟಿಸಿದರು. ಅವರ ಆ ಕೊನೆಯ ಸಿನಿಮಾದಲ್ಲೂ ಅವರ ಸತ್ವ ಎಂದಿನಂತೆಯೇ ಇತ್ತು. ಇರ್ಫಾನರಿಗೆ ಅವರ ಕಲೆಯೇ ಮತ್ತೆ ಜೀವ ತುಂಬಿದೆಯೆನ್ನಿಸಿತು. ಅದೇ ಆಗ ಸಾವಿನೊಂದಿಗೆ ಸೆಣಸಿದ್ದ ಇರ್ಫಾನ್ ತಮ್ಮ ಆವರೆಗಿನ ಬದುಕಿನಲ್ಲಿ ಇಂಗ್ಲಿಷಿನೊಂದಿಗೂ ಸೆಣಸಿದ್ದರು! ಅದು ಕೂಡ ಆ ಸಿನಿಮಾದಲ್ಲಿತ್ತು. ಒಳ್ಳೆಯ ಇಂಗ್ಲಿಷ್ ಬರದೆ ಮುಂಬೈನಲ್ಲಿ ಸೆಲೆಬ್ರಿಟಿ ನಟನಾಗುವುದು ಸಾಧ್ಯವಿಲ್ಲ ಎಂಬ ಧೋರಣೆಗಳ ನಡುವೆಯೂ ತಮಗೆ ಗೊತ್ತಿದ್ದಷ್ಟೇ ಇಂಗ್ಲಿಷಿನಲ್ಲಿ ಹಾಲಿವುಡ್ ಸಿನಿಮಾಗಳಲ್ಲೂ ಇರ್ಫಾನ್ ನಟಿಸಿ ಗೆದ್ದರು; ಅಸಲಿ ಪ್ರತಿಭೆ ಏನನ್ನಾದರೂ ಅನುಕರಿಸಬಲ್ಲದು, ಮರು ಸೃಷ್ಟಿಸಬಲ್ಲದು ಎಂದು ಕಳೆದ ಇಪ್ಪತ್ತು ವರ್ಷಗಳಲ್ಲಿ ಸಾಧಿಸಿ ತೋರಿಸಿದರು.

ಒಮ್ಮೆ ಕ್ಲಿಕ್ಕಾದ ರೀತಿಯ ಪಾತ್ರವನ್ನು ಮತ್ತೆ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಇರ್ಫಾನರಂತೆ ಖಚಿತವಾಗಿ ನಂಬುವ ನಟರು ಕಡಿಮೆ. 'ಹೀರೋ'ಗೆ ಇಂಥದೇ ಮುಖವಾಗಲೀ, ಇಂಥದೇ ಮೈಕಟ್ಟಾಗಲೀ ಮುಖ್ಯವಲ್ಲ; ಅಸಲಿಗೆ, ನಟನೊಬ್ಬ 'ಹೀರೋ' ಆಗಲೇಬೇಕಾಗಿಲ್ಲ; ನಟನೊಳಗಿನ ಸತ್ವ ಮಾತ್ರ ಅವನನ್ನು ಕಲಾವಿದನನ್ನಾಗಿ ಮಾಡುತ್ತದೆ ಎಂದು ಇರ್ಫಾನ್ ತೋರಿಸಿದರು. ಪ್ರತಿ ಪಾತ್ರದ ಒಳಸತ್ವವನ್ನು ಗುರುತಿಸಿ, ವ್ಯಾಖ್ಯಾನಿಸಿ, ವಿಸ್ತರಿಸಿ, ಆಯಾ ವ್ಯಕ್ತಿತ್ವಗಳ ಅಗೋಚರ ಸತ್ಯಗಳನ್ನು ಕಾಣಿಸಿದರು.

ಇರ್ಫಾನ್ ಎಷ್ಟು ಗಂಭೀರ ನಟನೆಂದರೆ, ರಾತ್ರಿ ಎಷ್ಟೋ ಹೊತ್ತಿನ ತನಕ ನಾಳೆಯ ಶೂಟಿಂಗ್ ಸ್ಕ್ರಿಪ್ಟ್ ಓದುತ್ತಿರುತ್ತಾರೆ ಎಂದು ಎಲ್ಲೋ ಓದಿದ್ದೆ. ಬಜಾರಿನಲ್ಲಿ, ರಸ್ತೆಯಲ್ಲಿ, ಲಿಫ್ಟಿನಲ್ಲಿ ಇರ್ಫಾನ್ ಡೈಲಾಗುಗಳನ್ನು ಗಟ್ಟು ಮಾಡಿಕೊಳ್ಳುತ್ತಿದ್ದ ರೀತಿಯನ್ನು ಸುತಾಪ ತಮಾಷೆಯಾಗಿ ಹೇಳಿಕೊಂಡಿದ್ದಾರೆ. ಇವೆಲ್ಲ ಪ್ರತಿ ಪಾತ್ರದ ಅನನ್ಯ ಮನೋಲೋಕವನ್ನು ಅರಿತು, ಆ ಪಾತ್ರದ ಸಾಧ್ಯತೆಗಳನ್ನು ವಿಸ್ತರಿಸಬೇಕು ಎಂದು ನಂಬಿದ್ದ ಇರ್ಫಾನರ ನಿತ್ಯ ತಯಾರಿಯ ಭಾಗಗಳಾಗಿದ್ದವು. ಎಂಥ ಪಾತ್ರಗಳನ್ನಾದರೂ ಜೀವಂತವಾಗಿಸುತ್ತಿದ್ದ ಅವರ ನಟನಾ ಕಲೆ ಪ್ರತಿಯೊಬ್ಬ ಜೀವಿಗೂ ತನ್ನದೇ ಆದ ವಿಶಿಷ್ಟ ಅಸ್ತಿತ್ವವೂ, ಮಹತ್ವವೂ ಇರುತ್ತದೆ ಎಂಬ ಸತ್ಯವನ್ನು ಸೂಚಿಸುವಂತಿತ್ತು. ಒಮ್ಮೆ ವಿಶಾಲ್ ಭಾರದ್ವಾಜ್, ಹೆಂಡತಿಗೆ ಸದಾ ಹೊಡೆಯುವ ಪಾತ್ರವೊಂದನ್ನು ಇರ್ಫಾನರಿಗೆ ಕೊಟ್ಟರು. ಆ ಪಾತ್ರ ಮಾಡಲು ಮೊದಮೊದಲು ಇರ್ಫಾನ್ ಒಲ್ಲೆನೆಂದರು; ಕಾರಣ ಆ ಪಾತ್ರದಲ್ಲಿ ತಾನು 'ಶೋಧಿಸುವುದಾಗಲೀ, ಅದರಿಂದ ಕಲಿಯುವುದಾಗಲೀ ಏನೂ ಇಲ್ಲ' ಎಂಬುದೇ ಆಗಿತ್ತು. ಆದರೂ ಆ ಪಾತ್ರದ ಮನಸ್ಥಿತಿಯನ್ನು ಕೂಡ ಅರ್ಥ ಮಾಡಿಕೊಂಡು ನಟಿಸಿದ ಇರ್ಫಾನ್, 'ಅತಿಯಾದ ಎಡಿಟಿಂಗಿನಿಂದಾಗಿ ಆ ಪಾತ್ರ ಭೀಕರವಾಗಿ ಕಂಡಿತು' ಎಂದು ಮುಂದೊಮ್ಮೆ ಹೇಳಿದ್ದರು.

ಇರ್ಫಾನ್ ತೀರಿಕೊಂಡ ನಂತರ ಕಲಾವಿದರು, ವಿಮರ್ಶಕರು, ಗೆಳೆಯರು ಬರೆದ ಮಾತುಗಳಲ್ಲಿ ಬಂದಿರುವ ಅಭಿಪ್ರಾಯಗಳು ರಿಪೀಟ್ ಆಗಿವೆ. ಅದಕ್ಕೆ ಮುಖ್ಯ ಕಾರಣ, ಇರ್ಫಾನರ ಪ್ರತಿಭೆಯ ಬಗ್ಗೆ ಈ ಎಲ್ಲರ ನಿಲುವೂ ಹೆಚ್ಚು ಕಡಿಮೆ ಒಂದೇ ಆಗಿರುವುದು! ಮನುಷ್ಯನ ಒಳಲೋಕದ ವಿಚಿತ್ರಗಳನ್ನು, ಮಾನವ ವ್ಯಕ್ತಿತ್ವದ ಬಹು ಬಗೆಯ ಸೂಕ್ಷ್ಮಗಳನ್ನು ಎಲ್ಲ ಬಗೆಯ ಪ್ರೇಕ್ಷಕರಿಗೂ ಕಾಣಿಸಬಲ್ಲ ಇರ್ಫಾನರಂಥ ಪ್ರತಿಭೆಗಳು ಸಿನಿಮಾರಂಗದಲ್ಲಿ ತೀರಾ ಕಡಿಮೆ. ಹೀಗಾಗಿಯೇ ಅವರ ನಿರ್ಗಮನ ನಿಜವಾದ ಅರ್ಥದಲ್ಲಿ ದೇಶದ ಬಹುದೊಡ್ಡ ಸಾಂಸ್ಕೃತಿಕ ನಷ್ಟ.

ಪ್ರತಿಕ್ರಿಯಿಸಿ: **feedback@sudha.co.in**